**ಪಾಠ-2** **ಜುಲೈ 4-10**

# ಆಕರ್ಷಣಮಯವಾದ ಸಾಕ್ಷಿ : ವೈಯಕ್ತಿಕ ಸಾಕ್ಷಿಯ ಬಲ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಮಾರ್ಕ 5:15–20; ಮಾರ್ಕ 16:1–11; ಅಪೊಸ್ತಲನ ಕೃತ್ಯಗಳು 4:1–20 ಮತ್ತು 1 ಯೋಹಾನ 1:1–3; ಗಲಾತ್ಯ 2:20; ಅಪೊಸ್ತಲರ ಕೃತ್ಯಗಳು 26:1–32.

**ಸ್ಮರಣವಾಕ್ಯ : "ನಾವಂತೂ ಕಂಡು ಕೇಳಿದ್ದನ್ನು ಹೇಳದೆ ಇರಲಾರೆವು"** (ಅ.ಕೃ. **4:20**).

ವೈಯಕ್ತಿಕ ಸಾಕ್ಷಿಯಲ್ಲಿ ಒಂದು ವಿಶೇಷಕರವಾದ ಶಕ್ತಿಯಿದೆ. ನಮ್ಮ ಹೃದಯಗಳು ಕ್ರಿಸ್ತನ ಪ್ರೀತಿಯಲ್ಲಿ ಆದರಣೆಗೊಂಡು ಆತನ ಕೃಪೆಯಿಂದ ಬದಲಾವಣೆಯಾಗಿ ಆತನ ಬಗ್ಗೆ ವಿಶೇಷವಾದದ್ದನ್ನು ಹೇಳುವಂಥದ್ದು ನಮ್ಮಲ್ಲಿರುತ್ತದೆ. ಯೇಸುಕ್ರಿಸ್ತನು ಮತ್ತೊಬ್ಬರಿಗೆ ಏನು ಮಾಡಿದನೆಂಬುದನ್ನು ಹಂಚಿಕೊಳ್ಳುವುದು ಒಂದು ವಿಷಯವಾದರೆ ನಮ್ಮ ಜೀವಿತದಲ್ಲಿ ವೈಯಕ್ತಿಕವಾಗಿ ಆತನು ಏನು ಮಾಡಿದ್ದಾನೆಂದು ಹಂಚಿಕೊಳ್ಳುವುದು ಮತ್ತೊಂದು ವಿಷಯವಾಗಿದೆ.

ಒಬ್ಬರ ವೈಯಕ್ತಿಕ ಅನುಭವದ ವಿರೋಧವಾಗಿ ವಾದ ಮಾಡುವುದು ಕಷ್ಟವಾಗಿರುತ್ತದೆ. ಜನರು ನಿಮ್ಮ ತತ್ವದ ಬಗ್ಗೆ ಅಥವಾ ಒಂದು ವಚನದ ಮೇಲೆ ನೀವು ಕೊಡುವ ವಿವರಣೆಯ ಬಗ್ಗೆ ಚರ್ಚೆ ಮಾಡಬಹುದು ಅಥವಾ ಒಂದು ಧರ್ಮದ ಬಗ್ಗೆ ಸಾಮಾನ್ಯಕರವಾದ ನಿಂದನೆಯನ್ನು ಸಹ ಮಾಡ

* ಈ ಪಾಠವನ್ನು ಜುಲೈ 11ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

ಬಹುದು. ಆದರೆ ಒಬ್ಬ ವ್ಯಕ್ತಿಯು, "ನಾನು ಒಮ್ಮೆ ಹತಾಶನಾಗಿದ್ದೆನು. ಈವಾಗ ನಿರೀಕ್ಷೆಯುಳ್ಳವನಾಗಿದ್ದೇನೆ; ನಾನು ತಪ್ಪಿತಸ್ಥ ಭಾವದಿಂದ ತುಂಬಿದ್ದೆನು. ಆದರೆ ಈವಾಗ ಸಮಾಧಾನದಿಂದಿದ್ದೇನೆ; ನಾನು ಗೊತ್ತುಗುರಿಯಿಲ್ಲದವನಾಗಿದ್ದೆನು. ಆದರೆ ಈವಾಗ ನನಗೊಂದು ಉದ್ದೇಶವಿದೆ" ಎಂದು ತನ್ನ ಬಗ್ಗೆ ಹೇಳಿಕೊಳ್ಳಬಲ್ಲನು. ದೇವರಲ್ಲಿ ನಂಬಿಕೆಯಿಲ್ಲದವನೂ ಸಹಾ ಸುವಾರ್ತೆಯ ಶಕ್ತಿಯಿಂದ ಬದಲಾಗುತ್ತಾನೆ.

ಕೆಲವರು, ಅಪೋಸ್ತಲನಾದ ಪೌಲನು ದಮಸ್ಕಕ್ಕೆ ಪ್ರಯಾಣ ಮಾಡುತ್ತಿರುವಾಗ ಮಾರ್ಗಮಧ್ಯದಲ್ಲೇ ಕ್ರಿಸ್ತನನ್ನು ಕಂಡುಕೊಂಡಂತೆ ಕಂಡುಕೊಳ್ಳುತ್ತಾರೆ. ಆದರೆ ಬಹಳಷ್ಟು ಸಲ ಅನೇಕರು ಕ್ರಿಸ್ತನ ಮೌಲ್ಯವನ್ನು ಗುರುತಿಸುವುದರಲ್ಲಿ ಬೆಳೆಯುತ್ತಾ ಹೋದಂತೆ ಅಂದರೆ ಆತನ ಆಶ್ಚರ್ಯಕರವಾದ ಕೃಪೆಯನ್ನು ಆಳವಾಗಿ ಮೆಚ್ಚುತ್ತಾ ಉಚಿತವಾಗಿ ದೊರಕುವ ರಕ್ಷಣೆಗೆ ಸರ್ವೋಚ್ಚವಾದ ಕೃತಜ್ಞತಾ ಪ್ರಜ್ಞೆಯಿಂದ ಮಾನಸಾಂತರ ಹೊಂದುತ್ತಾರೆ. ಕ್ರಿಸ್ತನು ಆಮೂಲಾಗ್ರವಾಗಿ ನಮ್ಮ ಜೀವಿತದ ಮೇಲೆ ದೃಷ್ಟಿ ನೆಡುತ್ತಾನೆ. ಈ ತೆರನಾದ ಸಾಕ್ಷಿಯನ್ನು ತಾನೆ ಲೋಕವು ಅಪೇಕ್ಷಿಸುತ್ತದೆ ಮತ್ತು ಅತ್ಯಾವಶ್ಯಕವಾಗಿ ಬೇಕಾಗಿದೆ.

**ಭಾನುವಾರ** **ಜುಲೈ 5**

## ಅಸಂಭವವೆನಿಸುವಂಥ ಸಾಕ್ಷಿಗಳು

ಮಾರ್ಕ 5:15–20 ಓದಿರಿ. ಯೇಸುವು ದೆವ್ವವನ್ನು ಬಿಡಿಸಿದ ಮೇಲೆ ಆ ಮನುಷ್ಯನನ್ನು ತನ್ನ ಬಳಿಯಲ್ಲಿ ಇರಿಸಿಕೊಂಡು ಆತನ ಹೊಸ ನಂಬಿಕೆಯನ್ನು ಪೋಷಿಸುವ ಬದಲು ಆತನು ದೆಕಪೊಲಿ ಸೀಮೆಗೆ ಹೋಗಿ ತನ್ನ ಮನೆಯವರಿಗೂ ತನ್ನ ಬಂಧುಗಳಿಗೂ ದೇವರು ಮಾಡಿದ ಉಪಕಾರವನ್ನು ಹೇಳುವಂತೆ ಕಳುಹಿಸಿದುದು ಯಾಕೆಂದು ಯೋಚಿಸುವಿರಿ?

ದೆಕಪೊಲಿ ಎಂಬ ಪದವು ದೆಕ ಮತ್ತು ಪೊಲಿ ಎಂಬ ಎರಡು ಪದಗಳಿಂದ ಆಗಿದೆ : ದೆಕ ಎಂಬುದರ ಅರ್ಥ ಹತ್ತು, ಪೊಲಿ ಎಂಬುದರ ಅರ್ಥ ಪಟ್ಟಣ.

ದೆಕಪೊಲಿ ಸೀಮೆಯು ಮೊದಲ ಶತಮಾನದಲ್ಲಿ ಗಲಿಲಾಯ ಸಮುದ್ರದ ಕರಾವಳಿ ಪ್ರದೇಶದಲ್ಲಿ ಹತ್ತು ಪಟ್ಟಣಗಳನ್ನು ಒಳಗೊಂಡಿತ್ತು. ಈ ಪಟ್ಟಣಗಳ ಭಾಷೆ ಮತ್ತು ಸಂಸ್ಕೃತಿ ಒಂದೇ ಆಗಿತ್ತು. ದೆವ್ವಗಳಿಂದ ಹಿಡಿಯಲ್ಪಟ್ಟು ಸಮಾಧಿಯ ಗವಿಯಲ್ಲಿ ವಾಸಿಸುತ್ತಿದ್ದ ಆ ಮನುಷ್ಯನ ಬಗ್ಗೆ ಆ ಸೀಮೆಯ ಜನರಿಗೆಲ್ಲಾ ತಿಳಿದಿತ್ತು. ಆತನು ತನ್ನ ಉಗ್ರವಾದ ವರ್ತನೆಯಿಂದ ಜನರ ಮನಸ್ಸಿನಲ್ಲಿ ಯಾವಾಗ ಏನು ಮಾಡುತ್ತಾನೋ ಎಂಬ ಭಯ ಹುಟ್ಟಿಸಿದ್ದನು. ಯೇಸುಕ್ರಿಸ್ತನು ಆತನು ತನ್ನಿಂದ ಒಳ್ಳೆಯದಾಗುವುದನ್ನು ಬಯಸುತ್ತಾನೆಂದು ಅರಿತು ಆತನನ್ನು ಬಹಳವಾಗಿ ಹಿಂಸಿಸುತ್ತಿದ್ದ ದೆವ್ವಗಳ ದಂಡಿನ ಹಿಡಿತದಿಂದ ಆಶ್ಚರ್ಯಕರವಾದ ರೀತಿಯಲ್ಲಿ ಬಿಡಿಸಿದ್ದನು.

ಯೇಸುವು ಆ ದೆವ್ವಗಳ ದಂಡು ಗುಡ್ಡದಲ್ಲಿ ಮೇಯುತ್ತಿದ್ದ ಹಂದಿಗಳ ಹಿಂಡನ್ನು ಸೇರುವುದಕ್ಕೆ ಅಪ್ಪಣೆ ಮಾಡಲು ದೆವ್ವಗಳು ಹಂದಿಗಳನ್ನು ಹೊಕ್ಕು ಅವುಗಳನ್ನು ಕಡಿದಾದ ಬಂಡೆಯಿಂದ ಸಮುದ್ರಕ್ಕೆ ಬೀಳುವಂತೆ ಮಾಡಿದ ವಿಷಯ ಆ ಊರಿನ ಜನರಿಗೆ ಗೊತ್ತಾಗಿ ಅದನ್ನು ನೋಡುವುದಕ್ಕೆ ಬಂದರು. ಅವರು ಯೇಸುವಿನ ಬಳಿಗೆ ಬಂದಾಗ ದೆವ್ವಗಳ ದಂಡು ಹಿಡಿದಿದ್ದ ಮನುಷ್ಯನು ಬಟ್ಟೆ ತೊಟ್ಟುಕೊಂಡು ಶಾಂತವಾಗಿ ಕುಳಿತಿರುವುದನ್ನು ಕಂಡು ಹೆದರಿದರು ಎಂಬುದನ್ನು ಮಾರ್ಕ 5:15ರಲ್ಲಿ ಓದುತ್ತೇವೆ. ಆ ಮನುಷ್ಯನು ಶಾರೀರಿಕ ಸ್ವಸ್ಥಗೊಂಡಿದ್ದನು. ಪಾಪದ ದೆಸೆಯಿಂದ ಕೆಟ್ಟುಹೋದ ಅವರನ್ನು ಕ್ರಿಸ್ತನು ಯಾವ ಕಾರಣಕ್ಕೆ ಉಂಟು ಮಾಡಿದನೋ ಅದಕ್ಕಾಗಿ ಅವರನ್ನು ಪುನರುಜ್ಜೀವನ ಗೊಳಿಸುವುದೇ ಸುವಾರ್ತೆಯ ಸಾರವಾಗಿದೆ.

ಇಡೀ ದೆಕಪೊಲಿ ಸೀಮೆಯಲ್ಲಿ ತನಗೆ ದೇವರು ಮಾಡಿದ ಉಪಕಾರವನ್ನು ಜನರೊಟ್ಟಿಗೆ ಹಂಚಿಕೊಳ್ಳುವುದಕ್ಕೆ ದೆವ್ವದಿಂದ ಬಿಡಿಸಲ್ಪಟ್ಟ ಈ ವ್ಯಕ್ತಿಗಿಂತ ಉತ್ತಮನಾದವನು ಯಾರು? ಎಲೆನ್ ಜಿ ವೈಟಮ್ಮನವರ ಇದನ್ನು ಹೀಗೆ ಚೆನ್ನಾಗಿ ಹೇಳುತ್ತಾರೆ: "ಕ್ರಿಸ್ತನಿಗೆ ಸಾಕ್ಷಿಯಾಗಿ ನಾವು ನಮಗೆ ಗೊತ್ತಿರುವುದನ್ನು, ಸ್ವತಃ ಏನನ್ನು ಕಂಡಿದ್ದೇವೆಯೋ ಕೇಳಿದ್ದೇವೆಯೋ ಮತ್ತು ಅನುಭವಿಸಿದ್ದೇವೆಯೋ ಅದನ್ನು ಹೇಳಬೇಕು. ನಾವು ಆತನ ಹೆಜ್ಜೆ ಜಾಡಿನಲ್ಲಿ ನಡೆದಿದ್ದರೆ ನಾವು ಆತನಿಂದ ನಡೆಸಲ್ಪಟ್ಟವರಾಗಿರುವ ಕಾರಣ ಅದರ ವಿಷಯದಲ್ಲಿ

ಹೇಳಬೇಕಾಗಿರುವಂಥದ್ದು ಯಾವಾಗಲು ಇರುತ್ತದೆ. ಆತನು ನಮಗೆ ಮಾಡಿದ ವಾಗ್ದಾನಗಳನ್ನು ಪರೀಕ್ಷಿಸಿ ಅವುಗಳನ್ನು ನಿಜವೆಂದು ಹೇಗೆ ತಿಳಿದುಕೊಂಡಿದ್ದೇವೆ ಎಂಬುದನ್ನು ಹೇಳಬಹುದು. ಆತನ ಕೃಪೆಯ ಬಗ್ಗೆ ನಮಗೆ ಏನು ಗೊತ್ತಿದೆಯೋ ಅದಕ್ಕೆ ಸಾಕ್ಷಿ ಹೊಂದಿರುತ್ತೇವೆ. ನಮ್ಮ ಕರ್ತನು ಇಂತಹ ಸಾಕ್ಷಿಯನ್ನು ನೀಡಲು ನಮ್ಮನ್ನು ಕರೆದಿದ್ದಾನೆ ಇದರ ಕೊರತೆಯಿಂದ ಲೋಕವು ನಾಶವಾಗುತ್ತಿದೆ". ದಿ ಡಿಸೈರ್ ಆಫ್ ಏಜಸ್, ಪುಟ 340.

ಲೋಕದಲ್ಲಿ ವ್ಯತ್ಯಾಸವನ್ನುಂಟು ಮಾಡಲು ಇಂತಹ ಬದಲಾವಣೆಯನ್ನು ದೇವರ ಕೃಪೆಯಿಂದ ಹೊಂದಿರುತ್ತಾರೋ ಅಂತಹ ಅಸಾಧ್ಯವೆನಿಸುವ ಸಾಕ್ಷಿಯನ್ನು ದೇವರು ಆಗಾಗ್ಗೆ ಉಪಯೋಗಿಸುವವನಾಗಿದ್ದಾನೆ. ನಿಮ್ಮ ಸ್ವಂತ ಜೀವನದ ಕಥೆ ಏನು– ಅಂದರೆ ನೀವು ಮಾನಸಾಂತರ ಹೊಂದಿದ ಕಥೆ? ನೀವು ಕ್ರಿಸ್ತ ನಂಬಿಕೆಗೆ ಒಂದುದರ ವಿಷಯದಲ್ಲಿ ಇತರರಿಗೆ ಏನು ಹೇಳುವಿರಿ? ಇನ್ನೂ ಮಾನಸಾಂತರ ಹೊಂದದಿರುವ ಒಬ್ಬ ವ್ಯಕ್ತಿಯು ನೀವು ಹಂಚಿಕೊಳ್ಳುವ ಅನುಭವದಿಂದ ಪ್ರಯೋಜನ ಪಡೆಯುವ ಹಾಗೆ ಆತನಿಗೆ ಏನನ್ನು ಕೊಡುವಿರಿ?

**ಸೋಮವಾರ** **ಜುಲೈ 6**

## ಪುನರುತ್ಥಾನ ಹೊಂದಿದ ಕ್ರಿಸ್ತನನ್ನು ಘೋಷಿಸುವುದು

ಭಾನುವಾರ ಮುಂಜಾನೆ ಮಗ್ದಲದ ಮರಿಯಳು ಮತ್ತು ಯಾಕೋಬನ ತಾಯಿಯಾದ ಮರಿಯಳು ಕ್ರಿಸ್ತನ ಸಮಾಧಿಯೆಡೆಗೆ ಆತುರಾತುರವಾಗಿ ನಡೆದು ಬಂದರ್. ಅವರು ಆತನನ್ನು ಏನನ್ನು ಕೇಳುವುದಕ್ಕಾಗಿಯೂ ಬಂದಿರಲಿಲ್ಲ. ಸತ್ತು ಹೋದ ವ್ಯಕ್ತಿಯು ಏನನ್ನು ತಾನೆ ಕೊಡಲು ಸಾಧ್ಯ? ಅವರು ಆತನನ್ನು ಕಡೆಯಸಲ ನೋಡಿದ್ದಾಗ ಆತನ ದೇಹವು ರಕ್ತಸಿಕ್ತವಾಗಿತ್ತು, ಚರ್ಮವು ಕಿತ್ತು ಬಂದಿತ್ತು. ಶಿಲುಬೆಯ ದೃಶ್ಯವು ಅವರ ಮನಸ್ಸಿನಲ್ಲಿ ಆಳವಾಗಿ ಕೊರೆಯಲ್ಪಟ್ಟಿತ್ತು. ಈವಾಗ ಅವರು ಸುಮ್ಮನೆ ತಮ್ಮ ಕರ್ತವ್ಯವನ್ನು ಮಾಡುತ್ತಿದ್ದರು. ಆತನ ದೇಹಕ್ಕೆ ಸುಗಂಧ ದ್ರವ್ಯವನ್ನು ಲೇಪಿಸುವುದಕ್ಕಾಗಿ ದುಃಖಭರಿತರಾಗಿ ಸಮಾಧಿಯ ಕಡೆಗೆ ನಡೆದರು. ದುಃಖದ ಛಾಯೆಯು ಅವರ ಕತ್ತಲು ಕವಿದ (ಹತಾಶೆ ತುಂಬಿದ) ಜೀವನವನ್ನು ಆವರಿಸಿತ್ತು. ಅವರ ಮುಂದಿನ ಭವಿಷ್ಯವು ಅನಿಶ್ಚತೆಯಿಂದ ಕೂಡಿದ್ದು ಅಲ್ಪಭರವಸೆಯನ್ನು ಕೊಟ್ಟಿತ್ತು.

ಅವರು ಸಮಾಧಿಯ ಬಳಿಗೆ ಬಂದು ಅದು ಖಾಲಿಯಿರುವುದನ್ನು ಕಂಡಾಗ ಗಲಿಬಿಲಿಗೊಂಡರು. ಮತ್ತಾಯನು ತನ್ನ ಸುವಾರ್ತೆಯಲ್ಲಿ ಯೇಸುವು ಪುನರುತ್ಥಾನದ ಬೆಳಗಿನ ಜಾವದಲ್ಲಿ ನಡೆದ ಘಟನೆಗಳನ್ನು ಹೀಗೆ ದಾಖಲಿಸಿದ್ದಾನೆ. ಆಗ ದೂತನು ಆ ಹೆಂಗಸರಿಗೆ ನೀವು ಹೆದರಬೇಡಿರಿ; ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತೀರೆಂದು ಬಲ್ಲೆನು; ಆತನು ಇಲ್ಲಿ ಇಲ್ಲ; ತಾನು ಹೇಳಿದಂತೆ ಎದ್ದಿದ್ದಾನೆ (ಮತ್ತಾಯ 28:5,6).

ಆವಾಗ ಆ ಸ್ತ್ರೀಯರು ಸಂತೋಷ ತುಂಬಿದವರಾದರು ಅವರನ್ನು ಮುಸುಕಿದ ದುಃಖದ ಕಾರ್ಮೋಡವು ಪುನರುತ್ಥಾನದ ಮುಂಜಾನೆಯಲ್ಲಿ ಹರಿದುಬಂದ ಬೆಳಕಿನ ಕಿರಣಗಳಲ್ಲಿ ಕರಗಿ ಹೋಯಿತು. ಅವರ ದುಃಖದ ರಾತ್ರಿಯು ಕಳೆದು ಹೋಯಿತು. ಸಂತೋಷವು ಅವರ ಮುಖಭಾವದಲ್ಲಿ ತುಂಬಿತು. ಅವರ ರೋದನೆಯ ಕಣ್ಣೀರು ಉಲ್ಲಾಸದ ಹಾಡಾಗಿ ಮಾರ್ಪಾಡಾಯಿತು.

ಮಾರ್ಕ 16:1–11 ವಚನಗಳನ್ನು ಓದಿರಿ. ಸತ್ತು ಹೋದ ಕ್ರಿಸ್ತನು ಮತ್ತೆ ಎದ್ದು ಬಂದಿದ್ದಾನೆಂದು ತಿಳಿದುಬಂದಾಗ ಮಗ್ದಲದ ಮರಿಯಳ ಪ್ರತಿಕ್ರಿಯೆ ಏನಾಗಿತ್ತು?

________________________________________

________________________________________

ಪುನರುತ್ಥಾನಗೊಂಡ ಕ್ರಿಸ್ತನನ್ನು ಸಂಧಿಸಿದ ಮೇಲೆ ಆಕೆಯು ಅದನ್ನು ಶಿಷ್ಯರಿಗೆ ತಿಳಿಸಲು ಓಡುತ್ತಾ ಹೋದಳು. ಹಂಚಿಕೊಳ್ಳುವುದಕ್ಕೆ ಅವಳ ಹತ್ತಿರ ಶುಭಸಂದೇಶವಿರುವಾಗ ಮೌನವಾಗಿ ಉಳಿದುಕೊಳ್ಳಲು ಅವಳಿಂದ ಸಾಧ್ಯವಾಗಲಿಲ್ಲ.

ಕ್ರಿಸ್ತನು ಬದುಕಿಬಂದಿದ್ದನು! ಆತನ ಸಮಾಧಿಯು ಬರಿದಾಗಿತ್ತು. ನಾವು ಕೂಡ ಮೇರಿಯಂತೆ ನಮ್ಮ ಜೀವಿತದ ಹೆದ್ದಾರಿಯಲ್ಲಿ ಪುನರುತ್ಥಾನಗೊಂಡ ಕ್ರಿಸ್ತನನ್ನು ಕಂಡುಕೊಂಡಿದ್ದೇವೆ. ಹಂಚಿಕೊಳ್ಳುವಂತಹ ಒಳ್ಳೆಯ ವಾರ್ತೆ (ಸುವಾರ್ತೆ) ನಮ್ಮ ಬಳಿ ಇರುವಾಗ ನಾವು ಸಹಾ ಓಡಿಹೋಗಿ ಎಲ್ಲರಿಗೂ ಹೇಳಬೇಕಾಗಿದೆ.

ಯೇಸುವು ತಾನು ಆಯ್ದುಕೊಂಡ ಶಿಷ್ಯರಿಗೆ ತನ್ನ ವಿಷಯದಲ್ಲಿ ಏನಾಗುತ್ತದೆ ಎಂದು ಮುಂದಾಗಿ ಹೇಳಿದ್ದಾಗ್ಯೂ, ತಾನು ಕೊಲ್ಲಲ್ಪಟ್ಟು ಮತ್ತೆ ಪುನರುತ್ಥಾನವಾಗುತ್ತೇನೆಂದು ತಿಳಿಸಿದ್ದಾಗ್ಯೂ ಮೇರಿಯ ಸಾಕ್ಷಿಯನ್ನು ಅವರು ನಂಬದೆ ಹೋದದ್ದು ಎಷ್ಟು ಸೋಜಿಗವನ್ನು ಉಂಟು ಮಾಡುತ್ತದೆ.

ಆತನು ಬದುಕಿದ್ದಾನೆ. ನಮಗೆ ಕಾಣಿಸಿಕೊಂಡನು ಎಂಬ ಮಾತನ್ನು ಕೇಳಿದಾಗ ಅವರು ನಂಬಲಿಲ್ಲ (ಮಾರ್ಕ 16:11). ಹಾಗಾಗಿ, ಯೇಸುಕ್ರಿಸ್ತನ ಶಿಷ್ಯರೇ ಹೇಳಿದ ಕೂಡಲೆ ನಂಬದೆ ಹೋದರು ಎಂದಮೇಲೆ ಇತರರು ನಮ್ಮ ಮಾತನ್ನು ಹೇಳಿದ ಕೂಡಲೆ ನಂಬದೆ ಹೋದಾಗ ಅದಕ್ಕೆ ನಾವು ಆಶ್ಚರ್ಯ ಪಡಬೇಕಾಗಿಲ್ಲ.

ಕಡೆಯದಾಗಿ ನೀವು ಕೊಟ್ಟ ಸಾಕ್ಷಿಯನ್ನು ಒಪ್ಪಿಕೊಳ್ಳದೆ ಜನರು ಯಾವಾಗ ನಿಮ್ಮನ್ನು ತಿರಸ್ಕರಿಸಿದರು? ಅದಕ್ಕೆ ನೀವು ಹೇಗೆ ಪ್ರತಿಕ್ರಿಯಿಸಿದಿರಿ ಮತ್ತು ಆ ಅನುಭವದಿಂದ ನೀವು ಏನನ್ನು ಕಲಿತುಕೊಂಡಿರಿ?

**ಮಂಗಳವಾರ ಜುಲೈ 7**

## ಬದಲಾದ ಜೀವನವು ವ್ಯತ್ಯಾಸವನ್ನು ತರುತ್ತವೆ

ಪೇತ್ರ ಯೋಹಾನರು ಧೈರ್ಯದಿಂದ ಮಾತಾಡುವುದನ್ನು ಆ ಸಭಿಕರು ನೋಡಿ ಅವರು ಶಾಸ್ತ್ರಾಭ್ಯಾಸ ಮಾಡಿದ ಸಾಧಾರಣರೆಂದು ತಿಳಿದು ಆಶ್ಚರ್ಯಪಟ್ಟರು. ಇವರು ಯೇಸುವಿನ ಸಂಗಡ ಇದ್ದವರೆಂದು ಗುರುತು ಹಿಡಿದರು (ಅ.ಕೃ. 4:13).

ಹೊಸ ಒಡಂಬಡಿಕೆ ಕಾಲದ ಸಭೆಯು ಬೆಳವಣಿಗೆಯಲ್ಲಿ ಸ್ಫೋಟಕದಂತೆ ಹರಡುತ್ತಾ ಹೋಯ್ತು. ಪಂಚಾಶತ್ತಮ ದಿನದಂದು ಸುಮಾರಾಗಿ ಮೂರು ಸಾವಿರ ಮಂದಿಯು ದೀಕ್ಷಾಸ್ನಾನ ಹೊಂದಿದರು (ಅ.ಕೃ. 2:4) ಮತ್ತೆ ಸಾವಿರಾರು ಜನರು ಸಭೆಗೆ ಕೆಲವು ವಾರಗಳಲ್ಲಿ ಸೇರಿಸಲ್ಪಟ್ಟರು (ಅ.ಕೃ 4:4). ಬಹಳ ಬೇಗನೆ ಅಧಿಕಾರಿಗಳು ಅಲ್ಲಿ ನಡೆಯುತ್ತಿದ್ದುದನ್ನು ಅರಿತುಕೊಂಡರು. ಅವರ ಜೀವನವು ಬದಲಾವಣೆಗೊಂಡಿತ್ತು. ಅವರು ಕರ್ತನ ಕೃಪೆಯಿಂದ ಪರಿವರ್ತನೆ ಗೊಂಡಿದ್ದಾರೆ. ಆದ್ದರಿಂದ ಅವರು ಸುಮ್ಮನೆ ಇರುವುದಕ್ಕಾಗಲಿಲ್ಲ.

ಅ.ಕೃ. 4:1–20ನ್ನು ಓದಿರಿ. ಇಲ್ಲಿ ಏನು ನಡೆಯಿತು? ಅಧಿಕಾರಿಗಳು ಪೇತ್ರ ಯೋಹಾನರನ್ನು ಸುಮ್ಮನಾಗಿಸಲು ಪ್ರಯತ್ನಿಸಿದಾಗ ಏನಾಯಿತು? ಅದಕ್ಕೆಅವರ ಪ್ರತಿಕ್ರಿಯೆ ಏನು?

---

---

ಈ ವಿಶ್ವಾಸಿಗಳು ಕ್ರಿಸ್ತನಲ್ಲಿ ಹೊಸಬರಾಗಿದ್ದರು. ಹಾಗಾಗಿ ತಮ್ಮ ಕಥೆಗಳನ್ನು ಇತರರಿಗೆ ಹೇಳುತ್ತಿದ್ದರು. ಗಟ್ಟಿ ಸ್ವರದಿಂದ ಮಾತಾಡುವ ಬೆಸ್ತನಾಗಿದ್ದ ಪೇತ್ರನು ದೇವರ ಕೃಪೆಯಿಂದ ಪರಿವರ್ತಿತನಾಗಿದ್ದನು. ಯಾಕೋಬ ಮತ್ತು ಯೋಹಾನರು ಸಿಡಿಲಿನ ಮರಿಗಳು ಎನಿಸಿಕೊಂಡಿದ್ದರು. ಅವರಿಗೆ ಸಂಯಮದಿಂದ ವರ್ತಿಸುವುದಕ್ಕೆ ಕಷ್ಟವಾಗುತ್ತಿತ್ತು. ಆದಾಗ್ಯೂ ದೇವರ ಕೃಪೆಯಿಂದ ಗುಣಸ್ವಭಾವದಲ್ಲಿ ಮಾರ್ಪಾಡು ಹೊಂದಿದ್ದರು.

ತೋಮನು ಅಪನಂಬಿಕೆಯುಳ್ಳವನಾಗಿದ್ದಾಗ್ಯೂ ದೇವರ ಕೃಪೆಯಿಂದ ಮಾರ್ಪಾಡು ಹೊಂದಿದ್ದನು. ಆದಿಸಭೆಯ ಶಿಷ್ಯರು ಮತ್ತು ಸದಸ್ಯರು ಇತರರಿಗೆ ತಮ್ಮ ಪರಿವರ್ತನೆಯ ಬಗ್ಗೆ ಹೇಳುವಂಥ ಸ್ವಂತ ಕಥೆಗಳು ಇದ್ದವು. ಆದುದರಿಂದ ಅವರು ತಮ್ಮ ಕಥೆಗಳನ್ನು ಹೇಳದೆ ಸುಮ್ಮನಿರುತ್ತಿರಲಿಲ್ಲ. ಎಲೆನ್ ಜಿ ವೈಟಮ್ಮನವರ ಒಂದು ಶಕ್ತಿಯುತವಾದ ಹೇಳಿಕೆಯನ್ನು ಗಮನಿಸಿರಿ. "ಒಬ್ಬನು ಯೇಸುಕ್ರಿಸ್ತನನ್ನು ಕಂಡುಕೊಳ್ಳುತ್ತಿದ್ದ ಕೂಡಲೇ ತಾನು ಎಂಥಾ ಅಮೂಲ್ಯಮಿತ್ರನನ್ನು ಪಡೆದುಕೊಂಡೆನೆಂದು ಇತರರಿಗೆ ಹೇಳಿಕೊಡಬೇಕೆಂಬ ಆಸೆಯು ಅವರ ಹೃದಯದಲ್ಲಿ ಹುಟ್ಟಿಕೊಳ್ಳುತ್ತಿತ್ತು. ರಕ್ಷಿಸುವ ಮತ್ತು ಪರಿಶುದ್ಧ ಪಡಿಸುವ ಸತ್ಯವನ್ನು ಒಬ್ಬನು ತನ್ನ ಹೃದಯದಲ್ಲೇ ಬಿಚ್ಚಿಟ್ಟುಕೊಳ್ಳಲಾರ" ಸ್ಟೆಪ್ಸ್ ಟು ಕ್ರೈಸ್ಟ್, ಪುಟ 78.

ದೇವಾಲಯದ ಅಧಿಪತಿಗಳು ಏನು ಹೇಳಿದರೆಂಬುದನ್ನು ಅ.ಕೃ. 4:16 ರಲ್ಲಿ ಗಮನಿಸಿರಿ. ಅಲ್ಲಿ ನಡೆದ ಸೂಚಕ ಕಾರ್ಯವನ್ನು ಮುಕ್ತವಾಗಿ ಒಪ್ಪಿಕೊಂಡರು ಕುಂಟುತನವು ವಾಸಿಯಾಗಿ ನೆಟ್ಟಗಾದ ಮನುಷ್ಯನು ಅವರ ಮುಂದೆಯೇ

ನಿಂತಿದ್ದನು. ಇದೆಲ್ಲವನ್ನು ಕಣ್ಣಾರೆ ಕಂಡಾಗ್ಯೂ ತಮ್ಮ ಮನೋಭಾವನೆಯನ್ನು ಬದಲಾಯಿಸಿಕೊಳ್ಳಲು ತಿರಸ್ಕರಿಸಿದರು. ಮುಕ್ತವಾದ ಪ್ರತಿರೋಧ ಬಂದಾಗ್ಯೂ ಪೇತ್ರಯೋಹಾನರು ಸಾಕ್ಷಿಯನ್ನು ಕೊಡುವುದಕ್ಕೆ ಹಿಂಜರಿಯಲಿಲ್ಲ.

ಕ್ರಿಸ್ತನನ್ನು ಅರಿತುಕೊಳ್ಳುವುದಕ್ಕೂ ಮತ್ತು ಆತನನ್ನು ಇತರರೊಂದಿಗೆ ಹಂಚಿಕೊಳ್ಳುವುದಕ್ಕೂ ಇರುವ ವ್ಯತ್ಯಾಸವೇನು? ನಾವು ಕ್ರಿಸ್ತನ ಬಗ್ಗೆ ಸಾಕ್ಷಿಯಾಗಿರುವುದಕ್ಕೆ ಆತನನ್ನು ವೈಯಕ್ತಿಕವಾಗಿ ಅರಿತುಕೊಳ್ಳುವುದು ಬಹಳ ಅವಶ್ಯಕವಾಗಿದೆ ಏಕೆ?

**ಬುಧವಾರ** **ಜುಲೈ 8**

## ನಮ್ಮ ಅನುಭವವನ್ನು ಹಂಚಿಕೊಳ್ಳುವುದು

ಅಪೋಸ್ತಲರ ಕೃತ್ಯಗಳು 26ನೇ ಅಧ್ಯಾಯದಲ್ಲಿ ಅಪೋಸ್ತಲನಾದ ಪೌಲನು ಸೆರೆಯಾಳಾಗಿ ಅಗ್ರಿಪ್ಪರಾಜನ ಮುಂದೆ ನಿಂತುಕೊಳ್ಳುತ್ತಾನೆ. ಇಲ್ಲಿ ಪೌಲನು ತನ್ನ ಸ್ವಂತ ಸಾಕ್ಷಿಯನ್ನು ರಾಜನಿಗೆ ನೇರವಾಗಿ ಹೇಳುತ್ತಾನೆ. ಆತನು ಹಿಂದೆ ಯೇಸುಕ್ರಿಸ್ತನ ಹಿಂಬಾಲಕರನ್ನು ಹೇಗೆ ಹಿಂಸಿಸುತ್ತಿದ್ದನು ಎಂಬುದನ್ನು ಮಾತ್ರವೇ ಹೇಳದೆ ತಾನು ಪರಿವರ್ತನೆಗೊಂಡನಂತರ ಕ್ರಿಸ್ತನಿಗೆ ತನ್ನ ಜೀವನವು ಸಾಕ್ಷಿಯಾಗಿರುವುದನ್ನೂ ಸತ್ತವರಿಗೆ ಇರುವ ಪುನರುತ್ಥಾನದ ವಾಗ್ದಾನದ ಬಗ್ಗೆಯೂ ರಾಜನಿಗೆ ಹೇಳುತ್ತಾನೆ (ಅ.ಕೃ 26:8). ಪೌಲನು ದಮಸ್ಕ ಪಟ್ಟಣಕ್ಕೆ ಹೋಗುವ ದಾರಿಯಲ್ಲಿ ಪರಿವರ್ತನೆಗೊಂಡಾಗ ನಮ್ಮ ಕರ್ತನಾದ ಯೇಸುಕ್ರಿಸ್ತನು ಪೌಲನಿಗೆ "ನಿನ್ನನ್ನು ನನ್ನ ಸೇವಕನಾಗಿಯೂ ಸಾಕ್ಷಿಯಾಗಿಯೂ ನೇಮಿಸುವುದಕ್ಕೋಸ್ಕರ ನಿನಗೆ ಕಾಣಿಸಿಕೊಂಡಿದ್ದೇನೆ. ನಾನು ಈಗಲೂ ಮುಂದೆ ಕೊಡಲಿಕ್ಕಿರುವ ದರ್ಶನಗಳಲ್ಲಿಯೂ ನಿನಗೆ ಕಾಣಿಸಿಕೊಂಡದ್ದನ್ನು ಕುರಿತು ನೀನು ಸಾಕ್ಷಿಯಾಗಿರಬೇಕು ಎಂದು ಹೇಳುತ್ತಾನೆ (ಅ.ಕೃ. 26:16). ನಾವು ನಮ್ಮ ನಂಬಿಕೆಯನ್ನು ಇತರರಿಗೆ ಹಂಚುವುದು ಯಾವಾಗಲೂ ಚಲನಾತ್ಮಕವಾದ ಅನುಭವವಾಗಿರುತ್ತದೆ. ಹಂಚಿಕೊಳ್ಳುವುದು ಅಂದರೆ ಹಿಂದೆ ನಮ್ಮ ಜೀವಿತದಲ್ಲಿ ಕ್ರಿಸ್ತನು ನಮಗೇನು ಮಾಡಿದನು, ಈವಾಗ ಏನು ಮಾಡುತ್ತಿದ್ದಾನೆ ಮತ್ತು ನಮಗಾಗಿ ಏನನ್ನು ನೆರವೇರಿಸುವನು ಎಂಬುದನ್ನು ಹೇಳುವಂಥದ್ದಾಗಿದೆ.

ಸಾಕ್ಷಿಕೊಡುವುದು ನಮ್ಮನ್ನು ಕುರಿತು ಹೇಳುವುದಲ್ಲ. ಅದು ಯಾವಾಗಲೂ ಆತನನ್ನು ಕುರಿತು ಹೇಳುವಂಥದ್ದು. ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವವನೂ ಸಮಸ್ತ ರೋಗಗಳನ್ನು ವಾಸಿ ಮಾಡುವವನೂ ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ ಪ್ರೀತಿ ಕೃಪೆಗಳಿಂದ ನನ್ನನ್ನು ಶೃಂಗರಿಸುವವನೂ ಆಗಿದ್ದಾನೆ. ಶ್ರೇಷ್ಠವರಗಳಿಂದ ನಿನ್ನ ಆಶೆಯನ್ನು ಪೂರ್ತಿಗೊಳಿಸುತ್ತಾನೆ (ಕೀರ್ತನೆಗಳು 103:3–5). ಸರಳವಾಗಿ ಹೇಳಬೇಕೆಂದರೆ ಸಾಕ್ಷಿಕೊಡುವಂಥದ್ದು ದೇವರ ಕೃಪೆಯನ್ನೊಳಗೊಂಡ ನಮ್ಮ ಜೀವನದ ಕಥೆಯನ್ನು ಹಂಚಿಕೊಳ್ಳುವುದೇ ಆಗಿದೆ. ಇದು ನಮ್ಮ ವೈಯಕ್ತಿಕ ಜೀವನದಲ್ಲಿ ಆಶ್ಚರ್ಯಕರವಾದ ಕೃಪೆಯುಳ್ಳ ದೇವರನ್ನು ಕಂಡುಕೊಂಡುದುದಕ್ಕೆ ಒಂದು ಪುರಾವೆಯಾಗಿದೆ.

1 ಯೋಹಾನ 1:1–3ನ್ನು ಓದಿರಿ. ಇದನ್ನು ಗಲಾತ್ಯ 2:20 ವಚನದೊಂದಿಗೆ ಹೋಲಿಸಿರಿ. ಯಾವ ಸಮಾನತೆಗಳನ್ನು ಇಲ್ಲಿ ಕಾಣುವಿರಿ? ಹೇಗೆ ಯೋಹಾನನ ಅನುಭವವು ಪೌಲನ ಅನುಭವಕ್ಕೆ ಹೋಲುತ್ತದೆ?

ಯೋಹಾನ ಮತ್ತು ಪೌಲನ ಜೀವನಾನುಭವವು ಬೇರೆ ಬೇರೆಯಾಗಿದ್ದಾಗ್ಯೂ ಇಬ್ಬರೂ ವೈಯಕ್ತಿಕವಾಗಿ ಯೇಸುಕ್ರಿಸ್ತನನ್ನು ಕಂಡುಕೊಂಡವರಾಗಿದ್ದರು. ಯೇಸು ಕ್ರಿಸ್ತನೊಂದಿಗಿನ ಅವರ ಅನುಭವವು ಒಂದು ನಿರ್ದಿಷ್ಟ ಕಾಲಕ್ಕೆ ಮುಂಚೆ ಅಥವಾ ನಂತರ ಆದುದಲ್ಲ ಅದು ಕ್ರಿಸ್ತನ ಪ್ರೀತಿಯಲ್ಲಿ ಮತ್ತು ಸತ್ಯದ ಬೆಳಕಿನಲ್ಲಿ ಪ್ರತಿನಿತ್ಯವೂ ನಿರಂತರವಾಗಿ ನಡೆಯುವಾಗ ಆಗುತ್ತಾ ಹೋಗುವ ಅನುಭವವಾಗಿದೆ.

ಪರಿವರ್ತನೆ ಎಂಬುದು ಭೂತಕಾಲದಲ್ಲಿ ನಡೆದುಹೋದ ವಿಷಯ ಮಾತ್ರವೇ? ಪರಿವರ್ತನೆಯೆಂಬುದು ಜೀವಿತದಲ್ಲಿ ಒಮ್ಮೆ ಘಟಿಸಿ ಹೋದ ಅನುಭವವಷ್ಟೆ ಎಂದು ಆಲೋಚಿಸುವವರ ವಿಷಯದಲ್ಲಿ ಎಲೆನ್ ಜಿ ವೈಟಮ್ಮನವರ ಹೇಳಿಕೆ ಏನೆಂದರೆ : "ಒಮ್ಮೆ ಒಂದು ಧರ್ಮದ ಬಗ್ಗೆ ತಿಳಿದುಕೊಂಡರೆ ಸಾಕು ಪ್ರತಿದಿನವೂ ಪರಿವರ್ತನೆಯಾಗ ಅಗತ್ಯವಿರುವುದಿಲ್ಲವೆಂಬಂತೆ ಭಾವಿಸುತ್ತಾರೆ; ಆದರೆ ನಾವು ಪ್ರತಿಯೊಬ್ಬರೂ ಪ್ರತಿದಿನವೂ ಪರಿವರ್ತನೆಯಾಗುತ್ತಲೇ ಇರಬೇಕಾಗಿದೆ. ಮ್ಯಾನುಸ್ಕ್ರಿಪ್ಟ್ ರಿಲೀಸಸ್, 4ನೇ ಸಂಪುಟ, 46ನೇ ಪುಟ.

ನಮ್ಮ ಹಿಂದಿನ ಅನುಭವವು ಎಂಥದ್ದೆ ಆಗಿರಲಿ ಒಂದು ವೇಳೆ ಬಹಳ ಬಲಯುತವಾದ ಮತ್ತು ಅನಿರೀಕ್ಷಿತವಾದದ್ದೇ ಆಗಿರಲಿ, ಕರ್ತನ ಬಲವನ್ನು ಮತ್ತು ಒಳ್ಳೆಯತನವನ್ನು ವಾಸ್ತವವಾಗಿ ಪ್ರತಿನಿತ್ಯವೂ ಅನುಭವಿಸುವುದಕ್ಕೆ ಆತನೊಂದಿಗಿನ ಪ್ರತಿನಿತ್ಯದ ಸಂಬಂಧವು ಮುಖ್ಯವಾಗಿದೆ ಏಕೆ? ಸಬ್ಬತ್ತಿನ ದಿನದಲ್ಲಿ ನಮ್ಮ ಉತ್ತರವನ್ನು ತರಗತಿಗೆ ತನ್ನಿರಿ.

**ಗುರುವಾರ** **ಜುಲೈ 9**

## ವೈಯಕ್ತಿಕ ಸಾಕ್ಷಿಯಲ್ಲಿರುವ ಶಕ್ತಿ

ಅಗ್ರಿಪ್ಪರಾಜನ ಮುಂದೆ ನಿಂತು ವಾದಿಸುವ ಪೌಲನನ್ನು ಮತ್ತೊಮ್ಮೆ ನೋಡೋಣ. ಈ ಅಗ್ರಿಪ್ಪನು ಯೆಹೂದ್ಯರಾಜರುಗಳ ಕಡೆಯ ತಲೆಮಾರಿನವನಾಗಿದ್ದು ಮಕ್ಕಾಬಿಯರ ಮತ್ತು ಹೆರೋದನ ಕುಟುಂಬಕ್ಕೆ ಸೇರಿದವನಾಗಿದ್ದನು. ಅವನು ಆಚಾರದಲ್ಲಿ ಯೆಹೂದಿ ಮತಾವಲಂಬಿಯಂತೆ ಕಾಣಿಸಿಕೊಂಡರೂ ಹೃದಯದಲ್ಲಿ ಒಬ್ಬ ರೋಮನ್ನನಾಗಿದ್ದನು (ಎಸ್.ಡಿ.ಎ. ಬೈಬಲ್ ಕಾಮೆಂಟರಿ, ಸಂಪುಟ 6, 436ನೇ ಪುಟ ನೋಡಿರಿ).

ವೃದ್ಧನಾದ, ತನ್ನ ಧರ್ಮಪ್ರಸಾರದ ದೀರ್ಘಪಯಣದಲ್ಲಿ ಆಯಾಸಗೊಂಡ ಮತ್ತು ಒಳ್ಳೆಯದರ ಹಾಗೂ ಕೆಟ್ಟದರ ನಡುವಿನ ವಿರಸದ ಹೋರಾಟದಲ್ಲಿ ಪ್ರಯಾಸ ಪಟ್ಟ ಅಪೋಸ್ತಲನಾದ ಪೌಲನು ಹೃದಯದಲ್ಲಿ ದೇವರ ಪ್ರೀತಿಯನ್ನು ತುಂಬಿದವನಾಗಿ ಮುಖದಲ್ಲಿ ದೇವರ ಒಳ್ಳೆಯತನವನ್ನು ಪ್ರತಿಫಲಿಸುವವನಾಗಿ ಅಗ್ರಿಪ್ಪನ ಮುಂದೆ ನಿಂತಿದ್ದಾನೆ. ತನ್ನ ಜೀವಿತದಲ್ಲಿ ಏನೇ ಆಗಿದ್ದರೂ ಎಂಥಾ ಕಷ್ಟಸಂಕಟಗಳ ಅನುಭವವಾಗಿದ್ದರೂ ದೇವರು ಒಳ್ಳೆಯವನು ಎಂದು ಸಾರಿ ಹೇಳುವವನಾಗಿದ್ದಾನೆ.

ಅಗ್ರಿಪ್ಪನು ಯಾವುದರಲ್ಲೂ ಒಳ್ಳೆಯದನ್ನು ಕಾಣದವನು (ಸಿನಿಕ) ಎಲ್ಲದಕ್ಕೂ ಸಂದೇಹಪಡುವವನು, ನಿಷ್ಠುರನು ಮತ್ತು ಯಾವುದೇ ಮೌಲ್ಯವುಳ್ಳ ಸುವ್ಯವಸ್ಥೆಯನ್ನು ತಾತ್ಸಾರ ಮಾಡುವವನಾಗಿದ್ದನು. ಇದಕ್ಕೆ ವ್ಯತಿರಿಕ್ತವಾಗಿ ಪೌಲನು ನಂಬಿಕೆಯುಳ್ಳವನೂ ಸತ್ಯಕ್ಕೆ ಬದ್ಧತೆಯುಳ್ಳವನೂ ನೀತಿಪರವಾಗಿ ಶ್ರಮಿಸುವ ನಿಷ್ಠನೂ ಆಗಿದ್ದನು. ಇವರಿಬ್ಬರಲ್ಲಿರುವ ಈ ವಿರೋಧಗುಣಗಳು ನೋಡುವವರಿಗೆ

ಸ್ಪಷ್ಟವಾಗಿರಲಿಲ್ಲ. ಪೌಲನು ತನ್ನ ವಿಚಾರಣೆಯ ಸಂದರ್ಭದಲ್ಲಿ ಮಾತಾಡಲು ಅಗ್ರಿಪ್ಪನಿಂದ ಅನುಮತಿಯನ್ನು ಕೇಳಿ ಪಡೆಯುತ್ತಾನೆ.

ಅ.ಕೃ. 26:1–32 ವಚನಗಳನ್ನು ಓದಿರಿ. ಪೌಲನು ಅಗ್ರಿಪ್ಪನಿಗೆ ಸಾಕ್ಷಿ ಕೊಡುತ್ತಾನೆ? ಆತನ ಮಾತಿನಿಂದ ನಾವು ಏನು ಕಲಿಯಬಹುದು?

---

---

ಒರಟುತನವು ಹೃದಯವನ್ನು ಮುಚ್ಚಿದರೆ ಮೃದುಸ್ವಭಾವವು ಅದನ್ನು ತೆರೆಸುತ್ತದೆ. ಪೌಲನು ಬಹಳ ಸೌಜನ್ಯಪೂರ್ವಕವಾಗಿ ಅಗ್ರಿಪ್ಪನ ಮುಂದೆ ನಡೆದುಕೊಳ್ಳುತ್ತಾನೆ. "ನೀನು ಯೆಹೂದ್ಯರ ಆಚಾರವಿಚಾರಗಳನ್ನು ಚೆನ್ನಾಗಿ ಬಲ್ಲವನೆಂದು ಅಗ್ರಿಪ್ಪನಿಗೆ ಹೇಳುತ್ತಾನೆ" (ಅ.ಕೃ 26:3). ತರುವಾಯ ಆತನು ತನ್ನ ಪರಿವರ್ತನೆಯ ಬಗ್ಗೆ ವಾದಿಸಲು ಮುಂದಾಗುತ್ತಾನೆ.

ಅ.ಕೃ 26:12–18 ವಚನಗಳಲ್ಲಿರುವ ಪೌಲನ ಪರಿವರ್ತನೆಯ ಬಗ್ಗೆ ಓದಿರಿ. ನಂತರ ಅಗ್ರಿಪ್ಪನ ಮೇಲಾಗುವ ಪರಿಣಾಮವನ್ನು ಎಚ್ಚರಿಕೆಯಿಂದ ಗಮನಿಸಿರಿ. ಯಾಕೆ ಅಗ್ರಿಪ್ಪನು ಹಾಗೆ ಪ್ರತಿಕ್ರಿಯಿಸಿದನು? ಪೌಲನ ಸಾಕ್ಷಿಯಲ್ಲಿ ಯಾವುದು ಅವನ ಮನಸ್ಸನ್ನು ಸೂರೆಗೊಂಡಿತು?

---

---

ಯೇಸುವು ಹೇಗೆ ತನ್ನ ಜೀವನವನ್ನು ಮಾರ್ಪಡಿಸಿದನು ಎಂದು ಪೌಲನು ಕೊಟ್ಟ ಸಾಕ್ಷಿಯು ದೇವರನ್ನು ನಂಬದ ರಾಜನ ಮೇಲೆ ಬಲಯುತವಾದ ಪರಿಣಾಮವನ್ನು ಉಂಟುಮಾಡಿತು. ಮಾರ್ಪಾಟಾದ ಜೀವನಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಸಾಕ್ಷಿಯು ಮತ್ತೊಂದಿಲ್ಲ. ನಿಜವಾಗಿ ಮಾರ್ಪಾಟಾದ ಜೀವನದ ಸಾಕ್ಷಿಯು ಇತರರ ಮೇಲೆ ಆಶ್ಚರ್ಯಕರವಾದ ಪ್ರಭಾವವನ್ನು ಬೀರುತ್ತದೆ. ಕೃಪೆಯಿಂದ ಪರಿವರ್ತನೆಗೊಂಡ ಜೀವಿತಗಳು ದೇವರನ್ನರಿಯದ ರಾಜರುಗಳ ಮನಸ್ಸನ್ನೇ ಕದಲಿಸಿವೆ. ಪೌಲನಿಗಾದ ಅನುಭವವು ನಾಟಕದ

ದೃಶ್ಯವು ಕೂಡಲೆ ಬದಲಾಗುವಂತೆ ಆಯ್ತು. ನಮ್ಮ ಕಥೆಯು ಹಾಗಿಲ್ಲದಿದ್ದರೂ ಯೇಸುಕ್ರಿಸ್ತನನ್ನು ಅರಿಯುವುದು ಮತ್ತು ಆತನ ರಕ್ತದಿಂದ ಬಿಡುಗಡೆ ಹೊಂದುವುದೆಂದರೆ ಏನರ್ಥವೆಂದು ಇತರರಿಗೆ ನಾವು ಹೇಳುವವರಾಗಿರಬೇಕು.

**ಶುಕ್ರವಾರ** **ಜುಲೈ 10**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ ಅಪೋಸ್ತಲರ ಕೃತ್ಯಗಳು ಪುಸ್ತಕದ "**ಆಲ್‌ಮೋಸ್ಟ್ ದೌ ಪರ್ಸುಯೇಡೆಡ್ ಮಿ**" ಎಂಬ ಅಧ್ಯಾಯದಲ್ಲಿ ಪುಟ 433–438.

ಯೇಸುಕ್ರಿಸ್ತನೊಂದಿಗಿನ ಸಮೃದ್ಧಿಯಾದ ಸಂಬಂಧವನ್ನು ಇತರರೊಂದಿಗೆ ಹಂಚಿಕೊಳ್ಳಲು ಹಂಬಲಿಸುವುದೇ ಕ್ರೈಸ್ತತ್ವದ ಸಾರವಾಗಿದೆ. ಇದು ಸ್ವಸ್ಥ ಬೋಧನೆಯಷ್ಟೇ ಮುಖ್ಯವಾಗಿದೆ ಮತ್ತು ಕ್ರಿಸ್ತನ ಪ್ರೀತಿ ಹಾಗು ಕೃಪೆಯಿಂದ ಮಾರ್ಪಾಟಾದ ಜೀವನದ ಕಥೆಯನ್ನು ಇತರರಿಗೆ ಹಂಚುವುದಕ್ಕೆ (ಸಾಕ್ಷಿ) ಪರ್ಯಾಯವಾದುದು ಯಾವುದೂ ಇಲ್ಲ. ಎಲೆನ್ ಜಿ ವೈಟಮ್ಮನವರು ತಮ್ಮ ಮಾತುಗಳಲ್ಲಿ ಹೀಗೆ ಹೇಳುತ್ತಾರೆ : ಯಾವುದೇ ವಾದವು ಎಷ್ಟೇ ತಾರ್ಕಿಕವಾಗಿದ್ದರೂ ಅದು ಹೃದಯವನ್ನು ಕರಗಿಸಲಾರದು ಅಥವಾ ಅದರ ಪ್ರಾಪಂಚಿಕತೆಯ ಮತ್ತು ಸ್ವಾರ್ಥದ ಮೇಲ್ಪದರವನ್ನು ಛೇದಿಸಲಾರದು ಎಂದು ರಕ್ಷಕನು ತಿಳಿದಿದ್ದಾನೆ.

ತನ್ನ ಶಿಷ್ಯರು ಪರಲೋಕದ ವರಗಳನ್ನು ಹೊಂದಿಕೊಳ್ಳಬೇಕು. ಆವಾಗ ಸುವಾರ್ತೆಯನ್ನು ಯಾವಾತನು ಮಾರ್ಗವೂ ಸತ್ಯವೂ ಜೀವವೂ ಆಗಿದ್ದಾನೋ ಆತನ ಜೀವವುಳ್ಳ ಜ್ಞಾನದಿಂದ ಕಾವುಗೊಂಡ ಹೃದಯದಿಂದಲೂ ಸಲಿಲಗೊಂಡ ತುಟಿಗಳಿಂದಲೂ ಸಾರುವಾಗ ಬಹಳ ಪರಿಣಾಮಕಾರಿಯಾಗಿರುತ್ತದೆ ಎಂದು ಅರಿತಿದ್ದನು. ಅಪೋಸ್ತಲರ ಕೃತ್ಯಗಳು ಪುಟ 31. ವೈಟಮ್ಮನವರು ತಮ್ಮ ಇನ್ನೊಂದು ಪುಸ್ತಕ ಡಿಸೈರ್ ಆಫ್ ಏಜಸ್‌ನ ಬಲಯುತವಾದ ಈ ಆಲೋಚನೆಯನ್ನು ಸೇರಿಸುತ್ತಾರೆ : ಮತ್ತೆ ಮತ್ತೆ ಹೇಳಿಕೊಡುವ ಬೋಧನೆಗಳು ಏನನ್ನು ಸಾಧಿಸಲಾರವೋ ಅದನ್ನು ಯೇಸುಕ್ರಿಸ್ತನ ಅದ್ಭುತವಾದ, ಹೃದಯವನ್ನು ಕರಗಿಸಿ ಮಣಿಸುವ ಪ್ರೀತಿಯು ಸಾಧಿಸುತ್ತದೆ, 826ನೇ ಪುಟ.

ದೇವರವಾಕ್ಯದಲ್ಲಿ ವೈಯಕ್ತಿಕವಾಗಿ ತಾವೇನು ಸತ್ಯವನ್ನು ಕಂಡುಕೊಂಡರೋ ಅದನ್ನು ಇತರರಿಗೆ ಹಂಚಿಕೊಂಡು ಅವರನ್ನು ಒಡಂಬಡಿಸುವ ಪ್ರಯತ್ನವನ್ನು ಅನೇಕರು ಮಾಡುತ್ತಾರೆ. ದೇವರ ವಾಕ್ಯದಲ್ಲಿರುವ ಸತ್ಯವನ್ನು ಕಾಲೋಚಿತವಾಗಿ ಇತರರಿಗೆ ಹಂಚಿಕೊಡುವುದು ಮುಖ್ಯವಾದರೂ ಯೇಸುಕ್ರಿಸ್ತನು ಉಚಿತವಾಗಿ ದಯಪಾಲಿಸುವ ನಿತ್ಯಜೀವದ ವರದಿಂದ ನಾವು ಹೊಂದಿಕೊಂಡಿರುವ ಪಾಪಮುಕ್ತ ಭಾವ, ಸಮಾಧಾನ, ಕರುಣೆ, ಕ್ಷಮೆ, ಬಲ ನಿರೀಕ್ಷೆ ಮತ್ತು ಸಂತೋಷಗಳು ಎಂಬುದನ್ನು ನಮ್ಮ ವೈಯಕ್ತಿಕ ಸಾಕ್ಷಿಯು ತೋರಿಸಿಕೊಡುವಂಥದ್ದಾಗಿರಬೇಕು.

## ಚರ್ಚಿಸಬೇಕಾದ ಪ್ರಶ್ನೆಗಳು

1. ಇನ್ನೊಬ್ಬರನ್ನು ಪ್ರಭಾವಿಸಲು ವೈಯಕ್ತಿಕ ಸಾಕ್ಷಿಯು ಮುಖ್ಯವೆಂದು ಏಕೆ ಅಂದುಕೊಳ್ಳುತ್ತೀರಿ? ಇತರರ ಸಾಕ್ಷಿಯು ನಿಮ್ಮ ಮೇಲೆ ನಿಮ್ಮ ಅನುಭವದ ಮೇಲೆ ಹೇಗೆ ಪರಿಣಾಮ ಬೀರಿದೆ?

2. ಬುಧವಾರದ ಪಾಠದಲ್ಲಿರುವ ಕಡೆಯ ಪ್ರಶ್ನೆಗೆ ಕೊಡುವ ಉತ್ತರವನ್ನು ತರಗತಿಯಲ್ಲಿ ಚರ್ಚಿಸಿರಿ. ಇತರರೊಂದಿಗೆ ಹಂಚಿಕೊಳ್ಳುವುದಕ್ಕೆ ಮಾತ್ರವಲ್ಲ ನಮ್ಮ ವೈಯಕ್ತಿಕ ನಂಬಿಕೆಗೂ ಅಗತ್ಯವಾಗಿರುವ ಪ್ರತಿದಿನವೂ ಕರ್ತನೊಂದಿಗೆ ಪಡೆಯುವ ಅನುಭವವು ಯಾಕೆ ಮುಖ್ಯವಾಗಿದೆ?

3. ಒಂದು ಬಲಯುತವಾದ ಪುರಾವೆಯು ಪರಿಣಾಮಕಾರಿಯಾದ ಸಾಕ್ಷಿಯಾಗಿರುತ್ತದೆಂಬುದು ನಿಜ. ಅದೇ ಸಮಯದಲ್ಲಿ ದೇವರಲ್ಲಿ ಭಯಭಕ್ತಿಯ ಜೀವನವು ನಮ್ಮ ಸಾಕ್ಷಿಗೆ ಮುಖ್ಯವಾದ ಭಾಗವಾಗಿರುತ್ತದೆ ಏಕೆ?

4. ತರಗತಿಯಲ್ಲಿ ನಿಮ್ಮ ಸ್ವಂತ ಸಾಕ್ಷಿಯನ್ನು ಹಂಚಿಕೊಳ್ಳಿರಿ. ಯೇಸುಕ್ರಿಸ್ತನು ನಿಮಗೆ ಏನು ಮಾಡಿದ್ದಾನೆ ನಿಮ್ಮ ಜೀವನದಲ್ಲಿ ಏನಾಗಿದ್ದಾನೆಂದು ನೆನಪು ಮಾಡಿಕೊಳ್ಳಿರಿ. ಯಾವ ವ್ಯತ್ಯಾಸವನ್ನು ಯೇಸುಕ್ರಿಸ್ತನು ನಿಮ್ಮ ಜೀವನದಲ್ಲಿ ತರುತ್ತಾನೆ?